


**ISSN: 2454–5813**
IJKR 2025; 11(1): 10-19
© 2025 IJKR
[www.kannadajournal.com](http://www.kannadajournal.com)
Received: 20-10-2024
Accepted: 25-11-2024

**ಡಾ. ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ, ಶೇಷಾದ್ರಿಪುರಂ
ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್
ಅಂಡ್ ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ, ಶೇಷಾದ್ರಿಪುರಂ
ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್
ಅಂಡ್ ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

# ಮಹಾಕವಿ ಕಾಳಿದಾಸನ ಕೃತಿಗಳಲ್ಲಿ ಪ್ರತಿಬಿಂಬಿತವಾದ ಭಾರತೀಯ ಸಾಹಿತ್ಯ ಮತ್ತು ಭಾರತೀಯ ದರ್ಶನ

**ಕವಿತಾ ಬಿ**

**DOI:** [https://doi.org/10.22271/24545813.2025.v11.i1a.1074](https://doi.org/10.22271/24545813.2025.v11.i1a.1074)

**ಸಾರಾಂಶ**

ಭಾರತೀಯ ಮತ್ತು ಪಾಶ್ಚಾತ್ಯ ದೃಷ್ಟಿಗಳೆರಡರಿಂದಲೂ ಕಾಳಿದಾಸನನ್ನು ಸಂಸ್ಕೃತ ಸಾಹಿತ್ಯದ ಸರ್ವಮಾನ್ಯನಾದ ಕವಿ ಎಂಬುದಾಗಿ ಆದರಿಸುತ್ತಾರೆ. ನಾಟ್ಯ ಕಲೆಯ ಸೌಂದರ್ಯ, ಕಾವ್ಯಗಳಲ್ಲಿನ ವರ್ಣನಾ ಶೈಲಿ, ಖಂಡ ಮತ್ತು ಗೀತಕಾವ್ಯಗಳ ಸರಸವಾದ ಹೃದಯ ಭಾವನೆ, ಇವೆಲ್ಲದರಲ್ಲಿಯೂ ಕಾಳಿದಾಸನ ಪ್ರತಿಭೆಯು ಸರ್ವತೋಮುಖವಾಗಿದೆ. ಅವನ ಖ್ಯಾತಿಯು ಎಷ್ಟು ನಿಶ್ಚಿತವಾಗಿದೆಯೋ, ಅವನ ಸಮಯವು ಅಷ್ಟೇ ಅನಿಶ್ಚಿತವಾಗಿದೆ. ಉಜ್ಜಯಿನೀ ಪ್ರದೇಶವಲ್ಲದೇ ಬಂಗಾಳ ಮತ್ತು ಕಾಶ್ಮೀರಗಳನ್ನು ಕಾಳಿದಾಸನ ಜನ್ಮಸ್ಥಾನವೆಂದು ಹೇಳುತ್ತಾರೆ. ಕಾಳಿದಾಸನು ನಿಸ್ಸಂದೇಹವಾಗಿ ಶೈವನಾಗಿದ್ದನು. ಅವನು ಉಜ್ಜಿನಿಯಲ್ಲಿನ ಜ್ಯೋತಿರ್ಲಿಂಗವಾದ ಮಹಾಕಾಲನ ಉಪಾಸಕನಾಗಿದ್ದನೆಂಬುದು ನಮ್ಮ ಅಭಿಪ್ರಾಯ. ಮೇಘದೂತದಲ್ಲಿ ಮಹಾಕಾಲನ ಉಪಾಸನೆಗಾಗಿ ತೋರಿಸುವ ಅವನ ಆಸಕ್ತಿಯೇ ಇದಕ್ಕೆ ಆಧಾರವೆಂದು ಅಂಗೀಕರಿಸಬಹುದು. ಮಹಾಕಾಲನ ವರ್ಣನೆ ಮಾಡುತ್ತಾ ಯಕ್ಷನು ಮೇಘಕ್ಕೆ ಹೇಳುತ್ತಾನೆ- ಉಜ್ಜಿನಿಯನ್ನು ನೀನು ಯಾವ ಸಮಯದಲ್ಲಿ ತಲಪಿದರೂ ಸಹ ಸೂರ್ಯನು ಅಸ್ತನಾಗುವವರೆವಿಗೂ ನೀನು ಅಲ್ಲಿ ಇರಬೇಕು. ಪ್ರದೋಷ ಪೂಜೆಯ ಸಮಯದಲ್ಲಿ ನೀನು ಸ್ನಿಗ್ಧ ಗಂಭೀರ ಘೋಷವನ್ನು ಮಾಡಬೇಕು, ಅದು ಮಹಾಕಾಲನ ಪೂಜೆಯ ಸಮಯದಲ್ಲಿ ನಗಾರಿಯ ಕೆಲಸವನ್ನು ಮಾಡುತ್ತದೆ. ಹೀಗೆ ಅಮೋಘವಾದ ವರ್ಣನೆಮಾಡಿದ್ದಾನೆ. ಇದು ಕವಿಯ ಧಾರ್ಮಿಕತೆ ಮತ್ತು ರಾಷ್ಟ್ರೀಯ ಮನೋಭಾವನೆಯ ಪ್ರತಿಬಿಂಬವಾಗಿದೆ.

ರಘುವಂಶ ಭಾರತೀಯ ವಿಮರ್ಶಾಪರಂಪರೆಯು ರಘುವಂಶವನ್ನು, ಕಾಳಿದಾಸನ ಸರ್ವಶ್ರೇಷ್ಠ ಕೃತಿ ಎಂದು ಆದರಿಸುತ್ತದೆ. ಆದುದರಿಂದ ಕಾಳಿದಾಸನಿಗೆ ಮಾತ್ರ "ರಘುಕಾರ" ಎಂಬ ಹೆಸರು ಪ್ರಯುಕ್ತವಾಗಿದೆ. ಬೇರೆ ಬೇರೆ ಕಾಲಗಳಲ್ಲಿ ರಚಿತವಾಗಿ ಉಪಲಬ್ಧವಾಗಿರುವ ಸುಮಾರು 40 ವ್ಯಾಖ್ಯಾನಗಳು, ಈ ಗ್ರಂಥವು ಎಷ್ಟು ಜನಪ್ರಿಯ ಹಾಗೂ ವ್ಯಾಪಕವಾಗಿತ್ತೆಂಬುದನ್ನು ಸೂಚಿಸುತ್ತದೆ. ಕಾಳಿದಾಸನ ಪಾತ್ರಗಳು ಜೀವನ ಶಕ್ತಿಯಿಂದ ಸಂಪನ್ನವಾದ ಜೀವಂತ ಜಗತ್ತಿನ ವ್ಯಕ್ತಿಗಳು. ಆತನ ಶಕುಂತಲೆಯು ಪ್ರಕೃತಿಯ ಕನ್ಯೆ, ಆಶ್ರಮದ ನಿಸರ್ಗ ಬಾಲಿಕಾ, ಮತ್ತು ಅವಳ ಜೀವನವನ್ನು ಬಾಹ್ಯಪ್ರಕೃತಿಯು ಕೋಮಲ ಮತ್ತು ಸ್ನಿಗ್ಧವನ್ನಾಗಿ ಮಾಡಿದೆ. ಹಿಮವಂತನ ಮಗಳಾದ ಪಾರ್ವತಿಯು ತಪಸ್ಸು ಮತ್ತು ಪಾತಿವ್ರತ್ಯದ ಪ್ರತೀಕ, ಮತ್ತು ಅವಳ ಕಠೋರವಾದ ತಪಸ್ಸಿನ ಮುಂದೆ ಋಷಿಗಳೂ ಸಹ ತಮ್ಮ ತಲೆಯನ್ನು ತಗ್ಗಿಸುತ್ತಾರೆ. ಧೀರತೆಯ ಮೂರ್ತಿ ಧಾರಿಣೀದೇವಿ. ಚಪಲ ಪ್ರೇಮದ ಮೂರ್ತಿಯಾದ ಮಾಳವಿಕಾ, ಉನ್ಮತ್ತಪ್ರೇಮದ ಅಧಿಕಾರಿಣಿಯಾದ ಊರ್ವಶೀ, ಪರಸ್ಪರ ಈರ್ಷ್ಯಾ ಮತ್ತು ಪ್ರಣಯದ ಪ್ರತಿನಿಧಿಯಾದ ಇರಾವತೀ,

ಇವರುಗಳು ಸಂಸ್ಕೃತ ಸಾಹಿತ್ಯದಲ್ಲಿ ಅವಿಸ್ಮರಣೀಯರಾದ ಸ್ತ್ರೀಪಾತ್ರಗಳು. ಆದರ್ಶ ಪಾತ್ರಗಳ ಚಿತ್ರಣದಲ್ಲಿ ರಘುವಂಶವು ಅದ್ವಿತೀಯವಾದುದು.

**ಪ್ರಧಾನ ಪದಗಳು:** ಮಹಾಕವಿ ಕಾಳಿದಾಸ, ವಿಶ್ವಕವಿ, ರಾಷ್ಟ್ರಕವಿ, ಭಾರತೀಯ ದರ್ಶನ, ಸಂಸ್ಕೃತಿ, ಸಾಹಿತ್ಯ, ಪರಂಪರೆ, ಮಹಾಕಾವ್ಯಗಳು, ಖಂಡಕಾವ್ಯಗಳು, ನಾಟಕಗಳು, ವೈದಿಕ ಸಂಸ್ಕೃತಿ, ಭಾರತೀಯ ಜೀವನಪದ್ಧತಿ, ಸಾಮಾಜಿಕ ಕಳಕಳಿ, ರಾಜನೀತಿ, ದಂಡನೀತಿ, ನೀತಿಶಾಸ್ತ್ರ, ಧಾರ್ಮಿಕತೆ, ಅಭಿಜ್ಞಾನಶಾಕುಂತಲಮ್, ರಸಭಾವ, ಉಪಮಾ ಕಾಲಿದಾಸಸ್ಯ, ಅಭಿವ್ಯಕ್ತಿ, ಉಜ್ಜಯಿನಿಯ ಮಹಾಕಾಲ, ಶೃಂಗಾರ.....ಇತ್ಯಾದಿ.

## ಪೀಠಿಕೆ

ಭಾರತೀಯ ಮತ್ತು ಪಾಶ್ಚಾತ್ಯ ದೃಷ್ಟಿಗಳೆರಡರಿಂದಲೂ ಕಾಳಿದಾಸನನ್ನು ಸಂಸ್ಕೃತಸಾಹಿತ್ಯ ಮತ್ತು ಇತಿಹಾಸದ ಸರ್ವಮಾನ್ಯನಾದ ಮಹಾಕವಿ, ವಿಶ್ವಕವಿ, ರಾಷ್ಟ್ರಕವಿ ಎಂಬುದಾಗಿ ಆದರಿಸುತ್ತಾರೆ. ನಾಟ್ಯಶಾಸ್ತ್ರ ಮತ್ತು ಕಲೆಯ ಸೌಂದರ್ಯ, ಕಾವ್ಯಗಳಲ್ಲಿನ ನಾನಾ ಬಗೆಯ ವರ್ಣನಾ ಶೈಲಿ, ಗೀತಕಾವ್ಯಗಳ, ಖಂಡಕಾವ್ಯಗಳ ಸರಸವಾದ ಹೃದಯ ಭಾವನೆ, ಇವೆಲ್ಲದರಲ್ಲಿಯೂ ಕಾಳಿದಾಸನ ಪ್ರತಿಭೆಯು ಸರ್ವತೋಮುಖವಾಗಿದೆ. ಅವನ ಖ್ಯಾತಿಯು ಎಷ್ಟು ನಿಶ್ಚಿತವಾಗಿದೆಯೋ, ಅವನ ಸಮಯವು ಅಷ್ಟೇ ಅನಿಶ್ಚಿತವಾಗಿದೆ. ಮಧ್ಯಪ್ರದೇಶದ ಉಜ್ಜಯಿನೀ ಅಲ್ಲದೇ, ಬಂಗಾಳ ಮತ್ತು ಕಾಶ್ಮೀರಗಳನ್ನು ಕಾಳಿದಾಸನ ಜನ್ಮ ಸ್ಥಾನವೆಂದು ಸಂಶೋಧನೆಗಳ ಮೂಲಕ ಹೇಳುತ್ತಾರೆ.

ಕಾಳಿದಾಸನು ಸ್ವತಂತ್ರನಾದ ಪ್ರತಿಭಾಸಂಪನ್ನ ಕವಿ, ಅವನು ತನ್ನ ಕಾವ್ಯ ಶೈಲಿಯನ್ನು ಸ್ವತಃ ನಿರೂಪಣೆ ಮಾಡಿರುತ್ತಾನೆ. ರಸಮಯವಾದ ಪದ್ಧತಿ ಮತ್ತು ಸುಕುಮಾರ ಮಾರ್ಗವನ್ನು ಅವಲಂಬಿಸಿದ ಕವಿ ತನ್ನ ಭಾವಗಳ ತೀವ್ರತೆ ಮತ್ತು ಉದಾತ್ತತೆಯ ಸಂಚಾರವನ್ನು ಪ್ರಕಟಿಸಲು ಅಲಂಕಾರಗಳನ್ನೂ ಸಹ ಬದಯ ಔಚಿತ್ಯ ದಿಂದ ಉಪಯೋಗಿಸಿದ್ದಾನೆ. "ಉಪಮಾ ಕಾಳಿದಾಸಸ್ಯ" ಎಂಬ ಭಾರತೀಯ ಉಕ್ತಿಯು ಸತ್ಯವಾದದ್ದು. ಅವನ ಉಪಮಾನಗಳು ಲೋಕದ ಮತ್ತು ಪ್ರಕೃತಿಯ ಸುಂದರ ಸನ್ನಿವೇಶಗಳಿಂದ ಆರಿಸಿದವು. ವಿಷಯವನ್ನು ಉನ್ನತಮಟ್ಟದಲ್ಲಿ ಪ್ರತಿಪಾದಿಸುವುದಕ್ಕೂ ಮತ್ತು ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವುದಕ್ಕೂ ಅತ್ಯಂತ ಸಮರ್ಥವಾಗಿವೆ. ಅಂತರ್ಜಗತ್ತು ಮತ್ತು ಬಾಹ್ಯಜಗತ್ತಿನಿಂದ ಆರಿಸಲ್ಪಟ್ಟವಾದುದರಿಂದ ಆ ಉಪಮಾನಗಳಲ್ಲಿ ಒಂದು ವಿಧವಾದ ವೈಲಕ್ಷಣ್ಯವಿದೆ. ರಸದ ವರ್ಣನೆಯಲ್ಲಿಯೂ ಕಾಳಿದಾಸನು ಅಪೂರ್ವವಾದ ಕೌಶಲವನ್ನು ಹೊಂದಿದ್ದಾನೆ. ಕುಮಾರಸಂಭವದಲ್ಲಿ (4ನೆಯ ಸರ್ಗ) ಮನ್ಮಥನ ವಿಷಯಕವಾದ ರತಿಯ ವಿಲಾಪ, ರಘುವಂಶದಲ್ಲಿ (8ನೆಯ ಸರ್ಗ) ಇಂದುಮತಿಗಾಗಿ ಅಜನ ವಿಲಾಪ, ಇವೆರಡು ಪ್ರಸಂಗಗಳು ಕರುಣರಸದ ಸಮಸ್ತ ವೃತ್ತಿಗಳನ್ನೂ ಪೂರ್ಣಮಾಡುತ್ತವೆ. ಮೇಘದೂತದಲ್ಲಿ ವಿರಹಿಯಾದ ಯಕ್ಷನು ತನ್ನ ವಿಯೋಗ ವಿಧುರೆಯಾದ ಪತ್ನಿಗೆ ಮೇಘದ ದ್ವಾರಾ ಕಳುಹಿಸುವ ಸಂದೇಶವು ಬಹು ಮನೋಹರವಾದ ಕಲ್ಪನೆಯಾಗಿರುತ್ತದೆ. ಯಕ್ಷನ ಪತ್ನಿಯ ವರ್ಣನೆಯು ಓದುಗರ ಹೃದಯದಲ್ಲಿ ಕರುಣರಸವನ್ನು ಪೋಷಿಸುತ್ತದೆ.

ಕಾಳಿದಾಸನ ನಿರೀಕ್ಷಣಾಶಕ್ತಿಯು ಅತ್ಯಂತ ಸೂಕ್ಷ್ಮವಾಗಿಯೂ ಮತ್ತು ವಿಶಾಲವಾಗಿಯೂ ಇದೆ. ಅವನು ಮಾಡಿರುವ ಪ್ರಕೃತಿಯ ವರ್ಣನೆಯು ವೈಜ್ಞಾನಿಕ ಮತ್ತು ಪ್ರತಿಭಾಯುಕ್ತವಾಗಿಯೂ ಇದೆ. ಇದಕ್ಕೆ ಉದಾಹರಣೆಗಳು ಅವನ ಕಾವ್ಯಗಳಲ್ಲಿ ಎಲ್ಲೆಡೆಯಲ್ಲಿಯೂ ಸಿಗುತ್ತವೆ. ಪರ್ವತದಲ್ಲಿನ ಝರಿಗಳ ಮೇಲೆ ಸೂರ್ಯನ ಕಿರಣಗಳು ಬಿದ್ದಾಗ ಅವುಗಳಲ್ಲಿ ಇಂದ್ರಧನಸ್ಸು ಹೊಳೆಯುತ್ತದೆ. ಆದರೆ ಸಂಧ್ಯಾ ಕಾಲದಲ್ಲಿ ಸೂರ್ಯನು ಅಸ್ತಂಗತನಾದ ಮೇಲೆ ಅವುಗಳಲ್ಲಿ ಕಾಮನಬಿಲ್ಲು ಕಾಣಿಸುವುದಿಲ್ಲ. ಈ ವೈಜ್ಞಾನಿಕ ಸತ್ಯದ ಮತ್ತು ಅವನ ಸೂಕ್ಷ್ಮದೃಷ್ಟಿಯ ಪ್ರತ್ಯಕ್ಷ ನಿದರ್ಶನಗಳು ಅನೇಕ ಪದ್ಯದಲ್ಲಿವೆ.

ಮಹಾಕವಿ ಕಾಳಿದಾಸನು ಭಾರತರಾಷ್ಟ್ರದ ಪ್ರತಿನಿಧಿಕವಿ. ಅವನ ಕಾವ್ಯಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಯು ಸಂಪೂರ್ಣವಾಗಿ ಅಭಿವ್ಯಕ್ತವಾಗಿರುತ್ತದೆ. ಧರ್ಮವೇ ನಮ್ಮ ಸಂಸ್ಕೃತಿಯ ಮೂಲ ಮಂತ್ರ. ಕಾಳಿದಾಸನು ಈ ಮಂತ್ರದ ರಹಸ್ಯವನ್ನು ಸಂಪೂರ್ಣವಾಗಿ ಅರಿತುಕೊಂಡು, ತನ್ನ ಕಾವ್ಯಗಳಲ್ಲಿ ಅಭಿವ್ಯಕ್ತಗೊಳಿಸಿರುತ್ತಾನೆ. ವೈದಿಕ ಧರ್ಮ ಮತ್ತು ದರ್ಶನವು ಈ ಜಗತ್ತಿನ ಉದಯ, ಪರಿಪಾಲನೆ ಮತ್ತು ವಿನಾಶಗಳಲ್ಲಿ ಒಂದು ವಿಶಾಲವಾದ ದೈವೀ ಶಕ್ತಿಯನ್ನು ಅಂಗೀಕರಿಸುತ್ತದೆ. ಆ ಶಕ್ತಿಯ

ಇಚ್ಛೆಯಿಲ್ಲದೆ ಜಗತ್ತಿನ ಒಂದು ಕೆಲಸವೂ ನಡೆಯುವುದಿಲ್ಲ. ಕಾಳಿದಾಸನು ಆ ಶಕ್ತಿಯನ್ನು ಈಶ್ವರನ ರೂಪದಲ್ಲಿ ಗ್ರಹಿಸಿರುತ್ತಾನೆ. "ಶಿವ" ಎಂಬುದು ಜಗತ್ತಿಗೆ ಮಂಗಳವನ್ನುಂಟುಮಾಡುವ ತತ್ತ್ವದ ಸಾಮಾನ್ಯ ಅಭಿಧಾನವಾಗಿರುತ್ತದೆ. ವಿಶ್ವದ ಪ್ರತಿಯೊಂದು ಪದಾರ್ಥವೂ ಅವನ ಅಸ್ತಿತ್ವವನ್ನು ಸೂಚಿಸುತ್ತದೆ, ಎಂಬುದು ಕವಿಯ ಕೃತಿಗಳಲ್ಲಿ ಅಭಿವ್ಯಕ್ತವಾಗಿದೆ..

**ವಿಷಯ ನಿರೂಪಣೆ**

ಕಾಳಿದಾಸಕವಿಯ ದೇಶ ಮತ್ತು ಕಾಲದ ವಿಚಾರವಾಗಿ ಹಲವಾರು ಸಂಶೋಧನೆಗಳು, ವಿಮರ್ಶೆಗಳು ಮತ್ತು ವಾದ–ವಿವಾದಗಳು ನಿರಂತರವಾಗಿ ಬೆಳೆದು ಬಂದಿದ್ದು, ಸಾಕಷ್ಟು ಜಿಜ್ಞಾಸೆಗೆ ಒಳಪಟ್ಟಿವೆ. ಕವಿಯು ಉಜ್ಜಯಿನಿಯ ವಿಷಯದಲ್ಲಿ ಪಕ್ಷಪಾತಿಯಾಗಿರುವುದರಿಂದ, ಅದೇ ಅವನ ಜನ್ಮ ಭೂಮಿಯಾಗಿರಬೇಕೆಂದು ಕಂಡುಬರುತ್ತದೆ. ಮೇಘದೂತದಲ್ಲಿ 'ಯಕ್ಷನು ಎಷ್ಟೇ ಕಷ್ಟವಾದರೂ ಸಹ "ಶ್ರೀವಿಶಾಲಾಂ[1] ವಿಶಾಲಾಂ" ಎಂದು ವಿಶಾಲಾ ಎಂಬ ನಗರವನ್ನು ನೋಡಲೇಬೇಕೆಂಬುದಾಗಿ ಮೇಘಕ್ಕೆ ತಿಳಿಸುತ್ತಾನೆ. ಉಜ್ಜಯಿನಿಯ ವಿಶಾಲವಾದ ಸೌಧಗಳನ್ನೂ, ಮತ್ತು ಅಲ್ಲಿನ ಸುಂದರಿಯರಾದ ಸ್ತ್ರೀಯರ ಕುಟಿಲಕಟಾಕ್ಷಗಳನ್ನೂ ನೋಡುವುದರಿಂದ ವಂಚಿತನಾದರೆ, ಅವನ ಜೀವನವೇ ನಿಷ್ಫಲವಾಗುತ್ತದೆ' ಎಂಬಂತೆ ವರ್ಣಿಸಿದ್ದಾನೆ. ಕಾಳಿದಾಸನು ಅವಂತೀಪ್ರದೇಶದ ಭೌಗೋಳಿಕ ಸ್ಥಿತಿಯ ಸೂಕ್ಷ್ಮವಾದ ವರ್ಣನೆಯನ್ನು ಮೇಘದೂತದಲ್ಲಿ ಮಾಡುತ್ತಾ, ಅಲ್ಲಿನ ಸಣ್ಣ ಸಣ್ಣ ನದಿಗಳ ಹೆಸರುಗಳನ್ನೂ ಸೂಚಿಸಿದ್ದಾನೆ. ಉಜ್ಜಯಿನಿಯ ವಿಷಯದಲ್ಲಿನ ಅವನ ವಿಶೇಷವಾದ ಪಕ್ಷಪಾತ ಮತ್ತು ಸೂಕ್ಷ್ಮವಾದ ಭೌಗೋಳಿಕ ಪರಿಚಯಗಳ ಆಧಾರದ ಮೇಲೆ, ಕಾಳಿದಾಸನು ಅಲ್ಲಿಯೇ ವಾಸಿಸುತ್ತಿದ್ದನೆಂಬುದು ಸಿದ್ಧವಾಗತ್ತದೆ.

ಕಾಳಿದಾಸನು ನಿಸ್ಸಂದೇಹವಾಗಿ ಶೈವನಾಗಿದ್ದು, ಉಜ್ಜಯಿನಿಯಲ್ಲಿನ ಜ್ಯೋತಿರ್ಲಿಂಗವಾದ ಮಹಾಕಾಲನ ಉಪಾಸಕನಾಗಿದ್ದನೆಂಬುದು ಸರ್ವಸಮ್ಮತವಾದ ವಿಷಯ. ಮೇಘದೂತದಲ್ಲಿ ಮಹಾಕಾಲನ ಉಪಾಸನೆಗಾಗಿ ತೋರಿಸುವ ಅವನ ಆಸಕ್ತಿಯೇ ಇದಕ್ಕೆ ಆಧಾರವೆಂದು ಅಂಗೀಕರಿಸಬಹುದು. ಮಹಾಕಾಲನ ವರ್ಣನೆ ಮಾಡುತ್ತಾ ಯಕ್ಷನು ಮೇಘಕ್ಕೆ ಹೇಳುತ್ತಾನೆ– 'ಉಜ್ಜಯಿನಿಯನ್ನು ನೀನು ಯಾವ ಸಮಯದಲ್ಲಿ ತಲಪಿದರೂ ಸಹ ಸೂರ್ಯನು ಅಸ್ತನಾಗುವವರೆವಿಗೂ ನೀನು ಅಲ್ಲಿದ್ದು; ಪ್ರದೋಷಪೂಜೆಯ ಸಮಯದಲ್ಲಿ ನೀನು ಸ್ನಿಗ್ಧ ಗಂಭೀರ ಘೋಷವನ್ನು ಮಾಡಬೇಕು; ಹಾಗೆಯೇ ಅದು ಮಹಾಕಾಲನ ಪೂಜೆಯ ಸಮಯದಲ್ಲಿ ನಗಾರಿಯ ಕೆಲಸವನ್ನು ಮಾಡುತ್ತದೆ; ಪೂಜೆಯ ದರ್ಶನದಿಂದ ನೀನು ಅತ್ಯಂತ ಪುಣ್ಯವಂತನಾಗುತ್ತೀಯೆ"[2] ಎಂದು ತನ್ನ ಧಾರ್ಮಿಕಶ್ರದ್ಧೆಯನ್ನು ಪ್ರಕಟಿಸಿದ್ದಾನೆ. ಇದಲ್ಲದೇ, ಕಾಳಿದಾಸನು ದೇವಾಲಯಗಳಲ್ಲಿ ನಿಯಮಿತರಾಗಿರುವ ದೇವದಾಸಿಗಳ ಪರಿಚಯವನ್ನೂ ಕೊಟ್ಟಿದ್ದು, ಈ ಪದ್ಧತಿಯು ದಕ್ಷಿಣದಲ್ಲಿ ಇಂದಿಗೂ ಪ್ರಚಲಿತವಾಗಿದೆ ಎನ್ನಲಾಗುತ್ತದೆ. ಉತ್ತರ ಭಾರತದ ದೇವ ಮಂದಿರಗಳಲ್ಲಿ ಈ ಪದ್ಧತಿಯು ವಿಶೇಷವಾಗಿ ಕಂಡು ಬರುವುದಿಲ್ಲ. ಉಜ್ಜಯಿನಿಯು ಪ್ರಾಚೀನಕಥೆಯ ಪ್ರಕಾರ ಉದಯನ ಮತ್ತು ವಾಸವದತ್ತೆಯರ ಉದಾತ್ತಪ್ರೇಮದ ಕ್ರೀಡಾ ಸ್ಥಳವಾಗಿದ್ದಿತು. ಹೀಗಾಗಿ, ಕಾಳಿದಾಸನು ಈ ಕಥೆಗೆ ಸಂಬಂಧಿಸಿದ ಸಣ್ಣ ಸಣ್ಣ ಘಟನೆಗಳನ್ನೂ, ಮತ್ತು ನಿಯತವಾದ ಸ್ಥಳಗಳನ್ನೂ ಉಲ್ಲೇಖಿಸಿ, ಆ ನಗರದ ವಿಷಯದಲ್ಲಿ ಸಂಪೂರ್ಣವಾದ ಪಕ್ಷಪಾತವನ್ನು ತೋರಿಸಿದ್ದಾನೆ.

ಭಾರತೀಯ ಜನಶ್ರುತಿಯ ಆಧಾರದ ಮೇಲೆ ಕಾಳಿದಾಸನು ರಾಜಾ ವಿಕ್ರಮಾದಿತ್ಯ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ[3] ಪ್ರಮುಖನಾದವರು. ಕಾಳಿದಾಸನ ಗ್ರಂಥಗಳಿಂದಲೂ ಅವನು ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ವಿಷಯವು ಸೂಚಿತವಾಗುತ್ತದೆ. ವಿಶ್ವವಿಖ್ಯಾತವಾದ ಶಾಕುಂತಲಾ ನಾಟಕದ ಅಭಿಯನವು ರಾಜನೋರ್ವನ, ಪ್ರಾಯಶಃ ವಿಕ್ರಮಾದಿತ್ಯನ, "ಅಭಿರೂಪ ಭೂಯಿಷ್ಠಾ" ಪರಿಷತ್ತಿನಲ್ಲಿ ಆಯಿತೆಂದೂ, ವಿಕ್ರಮೋರ್ವಶೀಯ ನಾಟಕದಲ್ಲಿ ಪುರೂರವನು ನಾಯಕನಾದರೂ ಸಹ, ವಿಕ್ರಮ ಎಂಬ ಹೆಸರು ನಾಟಕಕ್ಕಿದೆ; ಮತ್ತು "ಅನುತ್ತೇಕಃ ಖಲು ವಿಕ್ರಮ....." ಇತ್ಯಾದಿ ವಾಕ್ಯಗಳೂ ಇದನ್ನು ಪುಷ್ಟಿಕರಿಸುತ್ತವೆ. ಇದರಿಂದ, ಕಾಳಿದಾಸನಿಗೆ ವಿಕ್ರಮಾದಿತ್ಯನ ಸಂಬಂಧವು ಅವಶ್ಯವಾಗಿದ್ದಿತೆಂಬುದು

[1] ಖಂಡಕಾವ್ಯ: 1-29

[2] ಮೇಘದೂತಮ್- ಶ್ಲೋಕ 35

[3] ಧನ್ವಂತರಾದಿ ನವಮಣಿಗಳೆಂಬ ಉಲ್ಲೇಖವಿದೆ.

ಸ್ಪಷ್ಟವಾಗುತ್ತದೆ.

**ಕಾಳಿದಾಸನ ಕಾವ್ಯ ಗ್ರಂಥಗಳು**

ಕಾಳಿದಾಸನು ನಿಶ್ಚಯವಾಗಿ ರಚಿಸಿದ ಕಾವ್ಯಗಳಾವುವೆಂದು ನಿರ್ಣಯಿಸುವುದು ವಿಮರ್ಶಕನಿಗೆ ದುಷ್ಕರವಾದ ಕೆಲಸವೇ ಸರಿ. ಏಕೆಂದರೆ, ಕಾವ್ಯ ಜಗತ್ತಿನಲ್ಲಿ ಕಾಳಿದಾಸನ ಖ್ಯಾತಿಯನ್ನು ನೋಡಿ, ಅರ್ವಾಚೀನಕಾಲದ ಅನೇಕ ಕವಿಗಳು ಕಾಳಿದಾಸನ ಹೆಸರನ್ನು ಧರಿಸಿ, ತಮ್ಮ ವ್ಯಕ್ತಿತ್ವವನ್ನು ಮರೆಮಾಚಿದ್ದಾರೆ ಎಂಬ ಅಭಿಪ್ರಾಯವಿದೆ.. ರಾಜಶೇಖರನು[4] ಮೂರುಜನ ಕಾಳಿದಾಸರಿದ್ದುದನ್ನು ಸೂಚಿಸಿದ್ದಾನೆ' ಅವಿಚ್ಛಿನ್ನವಾದ ಪರಂಪರೆ ಮತ್ತು ಅನೇಕ ಕಾಳಿದಾಸರ ಅಸ್ತಿತ್ವ, ಇವೆರಡೂ ಸೇರಿ ಈ ಸಮಸ್ಯೆಯನ್ನು ಜಟಿಲವನ್ನಾಗಿ ಮಾಡಿದೆ ಎನ್ನಬಹುದು.

(ಅ) **ಋತುಸಂಹಾರ:** ಖಂಡಕಾವ್ಯ ಋತುಸಂಹಾರವು ಕಾಳಿದಾಸನ ಪ್ರಥಮಕೃತಿ ಎಂದು ವಿದ್ವಾಂಸರ ಅಭಿಪ್ರಾಯ. ಆರು ಸರ್ಗಗಳಿಂದ ಕೂಡಿದ ಈ ಕಾವ್ಯವು ಗ್ರೀಷ್ಮಋತುವಿನಿಂದ ಹಿಡಿದು ವಸಂತಋತುವಿನವರೆಗೆ ಎಲ್ಲಾ ಋತುಗಳ ಸ್ವಾಭಾವಿಕವಾದ, ಅಕೃತ್ರಿಮ ಹಾಗೂ ಸರಳವಾದ ವರ್ಣನೆಯನ್ನು ಪ್ರಸ್ತುತಗೊಳಿಸುತ್ತದೆ. ಈ ವಿಷಯವಾಗಿ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಭಾರತೀಯ ದೃಷ್ಟಿಯಲ್ಲಿ ಋತುಗಳ ವರ್ಣನೆಯು ರೂಢಿಯಿಂದ ಬಂದುದಾಗಿಯೂ, ಮತ್ತು ಸಾಮಂಜಸ್ಯಪೂರ್ಣವಾದುದೂ ಆಗಿದೆ. ಅಲಂಕಾರ ಗ್ರಂಥಗಳಲ್ಲಿ ಇದನ್ನು ಉದಹರಿಸದಿರುವುದು ಪೂರಕವಾದ ಪ್ರತೀತವಾಗುತ್ತದೆ.

(ಆ) **ಮೇಘದೂತ:** ಈ ಖಂಡಕಾವ್ಯವು ಕಾಳಿದಾಸನ ಅನುಪಮವಾದ ಪ್ರತಿಭೆಯ ನಿದರ್ಶನವಾಗಿದೆ. ವಿಯೋಗದಿಂದ ದುಃಖಿತಳಾದ ಕಾಂತೆಗೆ ಮೇಘದ ಜೊತೆಯಲ್ಲಿ ಯಕ್ಷನು ಕಳುಹಿಸುವ ಸಂದೇಶವೇ ಮುಖ್ಯವಾದ ಕಲ್ಪನೆಯಾಗಿರುತ್ತದೆ. ಪ್ರಾಯಶಃ ರಾಮಾಯಣದಲ್ಲಿ ಹನುಮಂತನನ್ನು ದೂತನನ್ನಾಗಿ ಕಳುಹಿಸುವ ಪ್ರಸಂಗವಾಗಲಿ, ಅಥವಾ ಮಹಾಭಾರತದಲ್ಲಿನ ಹಂಸದೂತದ ಪ್ರಸಂಗವಾಗಲೀ ಇದಕ್ಕೆ ಪ್ರೇರಣೆ ಯಾಗಿರಬಹುದು. ಆದರೆ, ಇದರ ರಚನಾ ಕೌಶಲ, ಮತ್ತು ವಿಷಯದ ಪ್ರತಿಪಾದನೆ ಇವೆಲ್ಲವೂ ಕವಿಯ ಪ್ರತಿಭೆಯ ಪರಿಣಾಮ, ಇದಕ್ಕಿರುವ ಅಧಿಕವಾದ ವ್ಯಾಖ್ಯಾನಗಳ ಸಂಪತ್ತಿನಿಂದಲೂ, ಮತ್ತು ಟಿಬೆಟ್ ಹಾಗೂ ಸಿಂಹಳದ ಭಾಷೆಗಳಲ್ಲಿ ಅನುವಾದಿತ[5] ವಾಗಿರುವುದರಿಂದಲೂ ಸಹ ಇದು ಎಷ್ಟು ಜನಪ್ರಿಯವಾದ ಕಾವ್ಯವಾಗಿದೆ ಎಂದು ವಿದಿತವಾಗುತ್ತದೆ. ಮೇಘದೂತವನ್ನು ಆದರ್ಶ ಎಂದು ಅಂಗೀಕರಿಸಿ 'ಸಂದೇಶಕಾವ್ಯ'ವೆಂದು ಪ್ರಸಿದ್ಧವಾದ ಕಾವ್ಯ ಪದ್ಧತಿಯೊಂದು ಆರಂಭವಾಯಿತು. ಪೂರ್ವಮೇಘದಲ್ಲಿ ರಾಮಗಿರಿಯಿಂದ ಅಲಕಾಪಟ್ಟಣದವರೇನ ಮಾರ್ಗವನ್ನು ವರ್ಣನೆ ಮಾಡುವ ಪ್ರಸಂಗದಲ್ಲಿ ಕವಿಯು ಸಮಗ್ರ ಭಾರತದ ಪ್ರಾಕೃತಿಕ ಸ್ಥಿತಿಯನ್ನು ಬಹು ಸುಂದರವಾಗಿ ವರ್ಣಿಸುತ್ತಾನೆ. ಇದು ಬಾಹ್ಯಪ್ರಕೃತಿಯ ಸೌಂದರ್ಯದ ಉಜ್ವಲವಾದ ನಿದರ್ಶನವಾಗಿದೆ. ಉತ್ತರಮೇಘದಲ್ಲಿ ಮಾನವ ಹೃದಯದ ಸೌಂದರ್ಯವು ವಿಮಲವಾಗಿ ಚಿತ್ರಿತವಾಗಿದೆ. ಯಕ್ಷನ ಪ್ರೇಮಸಂದೇಶವು ಅವನ ಕೋಮಲ ಹೃದಯದ, ಸ್ವಾಭಾನಿಕ ಸ್ನೇಹದ ಮತ್ತು ನೈಸರ್ಗಿಕ ಸಹಾನುಭೂತಿಯ ಪ್ರತಿಬಿಂಬವಾಗಿದೆ[6].

(ಇ) **ರಘುವಂಶ:** ಭಾರತೀಯ ವಿಮರ್ಶಾಪರಂಪರೆಯು ರಘುವಂಶವನ್ನು, ಕಾಳಿದಾಸನ ಸರ್ವಶ್ರೇಷ್ಠ ಕೃತಿ ಎಂದು ಆದರಿಸುತ್ತದೆ. ಹೀಗೆ, ಕಾಳಿದಾಸನಿಗೆ ಮಾತ್ರ "ರಘುಕಾರ" ಎಂಬ ಹೆಸರು ಪ್ರಯುಕ್ತವಾಗಿದೆ. ಬೇರೆ ಬೇರೆ ಕಾಲಗಳಲ್ಲಿ ರಚಿತವಾಗಿ ಉಪಲಬ್ಧವಾಗಿರುವ ಸುಮಾರು 40 ವ್ಯಾಖ್ಯಾನಗಳು, ಈ ಗ್ರಂಥವು ಎಷ್ಟು ಜನಪ್ರಿಯ ಹಾಗೂ ವ್ಯಾಪಕವಾಗಿತ್ತೆಂಬುದನ್ನು ಸೂಚಿಸುತ್ತದೆ. ದಿಲೀಪನ ಗೋ ಸೇವೆಯಿಂದ ರಘುವಿನ ಜನನವಾಗುತ್ತದೆ (2 ಮತ್ತು 3ನೇ ಸರ್ಗಗಳು). ಅವನು ತನ್ನ ಅಪ್ರತಿಮ ಪರಾಕ್ರಮದಿಂದ ಭಾರತವರ್ಷದ ದಿಗ್ವಿಜಯವನ್ನು ಮಾಡುತ್ತಾನೆ (4ನೇ ಸರ್ಗ), ತನ್ನ ಅದ್ಭುತವಾದ ದಾನಶೀಲತೆಯನ್ನು ತೋರಿಸಿ ಜನರು ಚಕಿತರಾಗುವಂತೆ ಮಾಡುತ್ತಾನೆ (5ನೇ ಸರ್ಗ). ಮುಂದಿನ ಮೂರು ಸರ್ಗ ಗಳಲ್ಲಿ ಇಂದುಮತಿಯ ಸ್ವಯಂವರ, ಸಮಾವೇಶಗೊಂಡಿದ್ದ ಸಮಸ್ತರಾಜರನ್ನೂ ಜಯಿಸಿ ರಘುಪುತ್ರನಾದ ಅಜ–ಇಂದುಮತಿಯರ ವಿವಾಹ,

[4] ಕ್ರಿ.ಶ. 10ನೇ ಶತಮಾನದಲ್ಲಿದ್ದ ಅಲಂಕಾರಪಂಡಿತ.

[5] ಸುಮಾರು 50 ವ್ಯಾಖ್ಯಾನಗಳಿವೆ.

[6] data-Indian Historical Quarterly - Vol. IV. Calcutta.

ಅಜವಿಲಾಸ––ಇವು ಕ್ರಮವಾಗಿ ವರ್ಣಿತವಾಗಿವೆ. 10ನೇ ಸರ್ಗದಿಂದ 15ನೇ ಸರ್ಗಗಳ ವರೆಗೆ ರಾಮಚರಿತ್ರೆಯ ವಿಸ್ತಾರವಾದ ವರ್ಣನೆ ಇದೆ. ಇದರಲ್ಲಿ ಕಾಳಿದಾಸನು ರಾಮಚರಿತ್ರೆಯ ವೈಶಿಷ್ಟ್ಯವನ್ನು ಬಹು ಸುಂದರವಾಗಿ ಚಿತ್ರಿಸಿದ್ದಾನೆ.

13ನೇ ಸರ್ಗದಲ್ಲಿ ಪುಷ್ಪಕವಿಮಾನಾರೂಢನಾದ ರಾಮನು ಭಾರತದ ಅನೇಕ ಸ್ಥಳಗಳನ್ನು ಸುಂದರವಾಗಿ ವರ್ಣಿಸುವುದು ಕಾಳಿದಾಸನ ಪ್ರತಿಭೆಯ ವಿಲಾಸವಾಗಿದೆ. 14ನೇ ಸರ್ಗವು ಸೀತೆಯ ಚರಿತೆಯಿಂದ ಉತ್ಕೃಷ್ಟವಾಗಿದೆ. ರಾಮನಿಂದ ಪರಿತ್ಯಕ್ತಳಾದ ಗರ್ಭಿಣೀ ಸೀತೆಯ ಪ್ರಣಯಸಂದೇಶದಲ್ಲಿ ಅಭಿವ್ಯಕ್ತವಾಗಿರುವ ಆತ್ಮಗೌರವ, ಮತ್ತು ಸ್ನೇಹವು ಪತಿವ್ರತೆಯರ ಚಾರಿತ್ರ್ಯದ ಉತ್ಕರ್ಷವಾಗಿದೆ. ಕೊನೆಯ ಕೆಲವು ಸರ್ಗಗಳಲ್ಲಿ ಕಾಳಿದಾಸನು ಅನೇಕ ರಾಜರುಗಳ ಚರಿತ್ರೆಯನ್ನು ಸ್ಥೂಲವಾಗಿ ಚಿತ್ರಿಸಿರುತ್ತಾನೆ. ಕೊನೆಯದಾದ 19ನೇ ಸರ್ಗದಲ್ಲಿ ಕಾಮುಕನಾದ ಅಗ್ನಿವರ್ಣನನ್ನು ಬಹು ಮಾರ್ಮಿಕವಾಗಿ ಚಿತ್ರಿಸಿರುತ್ತಾನೆ. ಇದರಲ್ಲಿ ಕಾಳಿದಾಸನು ಪ್ರಭುಶಕ್ತಿಯ ಕಲ್ಪನೆಯಲ್ಲಿ ತನ್ನ ವಿಚಾರವನ್ನು ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸಿದ್ದಾನೆ. ಪ್ರಕೃತಿ ರಂಜನೆಯ ಕಾರಣದಿಂದಲೇ ರಾಜನು ವೃದ್ಧಿ ಹೊಂದುತ್ತಾನೆ ಎಂದು ವಿವರಿಸಿದ್ದಾನೆ.

(ಈ) **ಕುಮಾರ ಸಂಭವಮ್**: ಇದು ಕಾಳಿದಾಸನ ನಿಸ್ಸಂದಿಗ್ಧವಾದ ರಚನೆ. ಇದರಲ್ಲಿ ಕವಿಯು ಕುಮಾರ ಕಾರ್ತಿಕೇಯನ ಜನನದ ವರ್ಣನೆಯನ್ನು ಸಂಕಲ್ಪ ಮಾಡಿದ್ದಾನೆ. ಪ್ರಚಲಿತವಾಗಿರುವ ಇದರ 17 ಸರ್ಗಗಳಲ್ಲಿ ಮೊದಲಿನ ಏಳು ಸರ್ಗಗಳು ಮಾತ್ರ ಕಾಳಿದಾಸನ ರಚನೆಯಾಗಿವೆ ಎಂಬ ಚರ್ಚೆಗಳುಂಟು. ಮಲ್ಲಿನಾಥನು ಕೂಡ ಈ ಸರ್ಗಗಳಿಗೆ ಮಾತ್ರ ತನ್ನ ಸಂಜೀವಿನೀ" ಎಂಬ ರಚಿಸಿರುತ್ತಾನೆ. 9ನೇ ಸರ್ಗದಿಂದ 17ನೇ ಸರ್ಗಗಳು ಇತರ ಸರ್ಗಗಳು ಬೇರೆ ಯಾವುದೋ ಕವಿಯಿಂದ ರಚಿತವಾದ ವಾದ–ವಿವಾದಗಳುಂಟು. ಈ ಉದಾತ್ತ ಪ್ರೇಮವನ್ನು ಅಭಿವ್ಯಕ್ತಗೊಳಿಸುವ, ಭಾವಸೌಷ್ಟವದಿಂದ ಕೂಡಿರುವ ಈ ಕಾವ್ಯಧಾರೆಯು ನಿರಂತರವಾಗಿ ಸಹೃದಯರನ್ನು ಆಹ್ಲಾದ ಪಡಿಸುತ್ತಲಿದೆ.

**ಕಾಳಿದಾಸನ ನಾಟಕ ಗ್ರಂಥಗಳು**

ಕಾಳಿದಾಸನಿಗೆ ಸಾಂಸಾರಿಕ ಅನುಭವಗಳಲ್ಲಿ ಮತ್ತು ಲೋಕವ್ಯವಹಾರದಲ್ಲಿ ಗಾಢವಾದ ಪ್ರಾವೀಣ್ಯವಿತ್ತೆಂಬುದರ ಪರಿಚಯವು ಅವನ ನಾಟಕಗಳಿಂದ ವ್ಯಕ್ತವಾಗುತ್ತದೆ. ಕವಿಯ ಮೂರು ನಾಟಕಗಳಲ್ಲಿ ಮಾನವಹೃದಯದಲ್ಲಿ ವಿಭಿನ್ನ ಪರಿಸ್ಥಿತಿಯಲ್ಲಿ ಉದಯಿಸುವ ವೃತ್ತಿಗಳನ್ನು ಲೋಕಜ್ಞಾನ, ಲೌಕಿಕವ್ಯವಹಾರದ ಜೊತೆಯಲ್ಲಿ ಪರಿಪೂರ್ಣವಾದ ಸಾಮಂಜಸ್ಯ ಹೊಂದುವಂತೆ ಚಿತ್ರಿಸಿರುತ್ತಾನೆ. ಈ ನಾಟಕಗಳಲ್ಲಿ ಪ್ರೇಮಮೂಲಕವಾದ ಆಖ್ಯಾನಗಳನ್ನೇ ಕವಿಯು ಕಥಾವಸ್ತುವಿನ ರೂಪದಲ್ಲಿ ಪರಿಗ್ರಹಿಸಿರುತ್ತಾನೆ. ಮಾಳವಿಕಾಗ್ನಿಮಿತ್ರದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿ ರಾಜನ ಅಂತಃಪುರದಲ್ಲಿ ಉದಯಿಸುವ ಪ್ರೇಮದ ಚಿತ್ರಣವಿದೆ. ವಿಕ್ರಮೋರ್ವಶೀಯದಲ್ಲಿ, ಪುರುಷನನ್ನು ತನ್ನ ನಾಯಕಿಯ ವಿರಹದಿಂದ ಹುಚ್ಚನನ್ನಾಗಿ ಮಾಡುವ ಪ್ರೇಮದ ವರ್ಣನೆ ಇದೆ. ಶಾಕುಂತಲಾ ನಾಟಕದ ಪರಿಸ್ಥಿಯು ಇವೆರಡಕ್ಕಿಂತಲೂ ಭಿನ್ನವಾದುದು. ಅದರಲ್ಲಿ ತಪಸ್ಸು ಮತ್ತು ಸಾಧನೆಯ ಮೂಲಕ ವಿರಹಾಗ್ನಿಯಿಂದ ವಿಶುದ್ಧವಾದ ಕಾಮವು ಪ್ರೇಮದಲ್ಲಿ ಪರಿಣಿತವಾಗುವ ಸುಂದರವಾದ ಚಿತ್ರವು ಪ್ರಸ್ತುತವಾಗಿದೆ. ಕಾಳಿದಾಸನ ಈ ಮೂರು ನಾಟಕಗಳೂ ವಸ್ತು ಮತ್ತು ರಸದ ದೃಷ್ಟಿಯಿಂದ ಅನುಪಮವಾಗಿವೆ.

1. ಮಾಲವಿಕಾಗ್ನಿಮಿತ್ರದಲ್ಲಿ ಶುಂಗವಂಶದ ರಾಜನಾದ ಅಗ್ನಿ ಮಿತ್ರ ಮತ್ತು ಮಾಳವಿಕೆಯರ ಪ್ರೇಮದ ಸುಂದರವಾದ ಚಿತ್ರಣವು ಇತಿಹಾಸದ ಹಿನ್ನೆಲೆಯಲ್ಲಿ ಮನೋಹರವಾಗಿ ಪ್ರಸ್ತುತವಾಗಿದೆ. ಕವಿಯು ರಾಜರುಗಳ ಅಂತಃಪುರದಲ್ಲಿ ವಿಕಸಿತವಾಗುವ ಪ್ರೇಮ, ರಾಣಿಯರ ಪರಸ್ಪರ ಈರ್ಷ್ಯೆ; ರಾಜನ ಸ್ವಭಾವ, ಮಹಾರಾಣಿಯಾದ ಧಾರಿಣಿಯ ಧೈರ್ಯ ಮತ್ತು ಉದಾತ್ತತೆಗಳನ್ನು ಬಹು ಅನುಭವಪೂರ್ಣವಾಗಿ ಚಿತ್ರಿಸಿದ್ದಾನೆ.
2. ವಿಕ್ರಮೋರ್ವಶೀಯದಲ್ಲಿ ಕಾಳಿದಾಸನು ಒಂದು ವೈದಿಕ ಪ್ರೇಮಜ್ಞಾನವನ್ನು ಮುಖ್ಯವಾಗಿ ಋಗ್ವೇದ[7] ಮತ್ತು ಶತಪಥ ಬ್ರಾಹ್ಮಣಗಳಲ್ಲಿ ನಿರ್ದಿಷ್ಟರಾದ ಪುರೂರವ ಮತ್ತು ಊರ್ವಶಿಯರ ಪ್ರೇಮಾಖ್ಯಾನವನ್ನು ಸುಂದರವಾದ ನಾಟಕದಲ್ಲಿ ಪ್ರಸ್ತುತಗೊಳಿಸಿದ್ದಾನೆ. ಪ್ರಾಚೀನವಾದ ಈ ಪ್ರೇಮಾಖ್ಯಾನವು ತನ್ನ ಪ್ರೌಢತೆ

[7] ಋಗ್ವೇದ 10-95, ಶತಪಥಬ್ರಾಹ್ಮಣ 11-5-1

ಮತ್ತು ಚಮತ್ಕಾರಗಳ ಕಾರಣದಿಂದ ಕವಿಯ ಮನಸ್ಸನ್ನು ಆಕರ್ಷಿಸಿದೆ. ಪುರೂರವನು ಸರ್ವದಾ ಉಪಕಾರ ಪರಾಯಣನಾದ ರಾಜ, ಪುರೂರವನ ಉತ್ಕೃಷ್ಟವಾದ ಪ್ರೇಮದ, ಸಂಸಾರದ ಸಮಸ್ತ ಬಂಧನಗಳನ್ನೂ ಮೀರಿ ಹರಿಯುವ ಪ್ರೇಮದ ಚಿತ್ರಣವನ್ನು ಕವಿಯು ಬಹುಮಾರ್ಮಿಕವಾಗಿ ಚಿತ್ರಿಸಿದ್ದಾನೆ.

3. ಅಭಿಜ್ಞಾನ ಶಾಕುಂತಲಾ–ಇದು ಕಾಳಿದಾಸನ ಅತ್ಯಂತ ಪ್ರಸಿದ್ಧವಾದ ನಾಟಕ. ಭಾರತೀಯ ವಿಮರ್ಶಕರು ಈ ನಾಟಕವನ್ನು ನಾಟಕಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ಕೃತಿ ಎಂದು ಪರಿಗಣಿಸುತ್ತಾ "ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ"। ಎಂದೇ ಪ್ರಶಂಸಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರೂ ಸಹ ಇದನ್ನು ಅತ್ಯುತ್ತಮ ನಾಟಕವೆಂದು ಅಂಗೀಕರಿಸುತ್ತಾರೆ. ಇದರಲ್ಲಿ 7 ಅಂಕಗಳಿವೆ. ಏಳನೆಯ ಅಂಕದಲ್ಲಿ ದುಷ್ಯಂತನು ವಿಜಯಿಯಾಗಿ ಸ್ವರ್ಗದಿಂದ ಹಿಂದಿರುಗಿ ಬರುತ್ತಲಿರುವಾಗ, ಮಾರೀಚರ ಆಶ್ರಮದಲ್ಲಿ ತನ್ನ ಪತ್ನಿ ಮತ್ತು ಪುತ್ರರನ್ನು ನೋಡುತ್ತಾನೆ. ಈ ಪುನರ್ಮಿಲನ, ಮತ್ತು ಮಾರೀಚರ ಆಶೀರ್ವಾದದಿಂದ ನಾಟಕವು ಮುಕ್ತಾಯವಾಗುತ್ತದೆ. ಮಹಾಕವಿಕಾಳಿದಾಸನ ಕವಿತೆಯು ದೇವವಾಣಿಯ ಶೃಂಗಾರ ವಿಲಾಸವಾಗಿದೆ. ಮಾಧುರ್ಯದ ಮಧುರ ನಿವೇಶನ, ಪ್ರಸಾದಗುಣದ ಸ್ನಿಗ್ಧತೆ, ಪದಗಳ ಸರಸತೆ, ಅರ್ಥಸೌಷ್ಟವ, ಅಲಂಕಾರಗಳ ಮಂಜುಳವಾದ ಪ್ರಯೋಗ, ಇತ್ಯಾದಿ ಸುಂದರ ಕಾವ್ಯದ ಸಮಸ್ತಗುಣಗಳೂ ಕಾಳಿದಾಸನ ಕಾವ್ಯಗಳಲ್ಲಿ ತುಂಬಿವೆ.

***ಉಪಮಾ ಕಾಳಿದಾಸಸ್ಯ**

ಕಾವ್ಯದಲ್ಲಿ ಅಲಂಕಾರಗಳ ಪ್ರಯೋಗದ ವಿಷಯದಲ್ಲಿ ಧ್ವನಿವಾದಿಯಾದ ಪಂಡಿತ ಅನಂದವರ್ಧನನು ಒಂದು ರಹಸ್ಯಮಯವಾದ ಮಾತನ್ನು ಪ್ರಸ್ತುತಗೊಳಿಸುತ್ತಾನೆ.

> "ರಸಾಕ್ಷಿಪ್ತ ತಯಾ ಯಸ್ಯ ಬಂಧಃ ಶಬ್ದ ಕ್ರಿಯೋ ಭವೇತ್। ಅಸೃಥಗ್ಯತ್ನ ನಿರ್ವರ್ತ್ಯರ: ಸೋಽಲಂಕಾರೋ ಧ್ವನಿ ಮತಃ॥"[8]

ರಸಾಕ್ಷಿಪ್ತವಾಗಿರುವ ಕಾರಣದಿಂದ ಯಾವುದರ ಬಂಧ ಅಥವಾ ನಿರ್ಮಾಣವು ಶಕ್ಯವಾಗುವುದೋ, ಮತ್ತು ಯಾವುದರ ಸಿದ್ಧಿಗಾಗಿ ಯಾವುದೇ ಪ್ರಕಾರವಾದ ಬೇರೆ ಪ್ರಯತ್ನದ ಅವಶ್ಯಕತೆ ಇರುವುದಿಲ್ಲವೋ, ಆದೇ ವಾಸ್ತವವಾದ ಆಲಂಕಾರ ಎಂದು ಧ್ವನಿವಾದಿಗಳ ಮತ, ರಸಾನುಭವವು ಮೊದಲಾಗುತ್ತದೆ. ಅದನ್ನೇ ಚಿತ್ರಪ್ರಯಾಸದಿಂದ ಅಲಂಕಾರಾದಿಗಳ ಮಾಧ್ಯಮ ದ್ವಾರಾ ಕವಿಯು ರಸಪ್ರತಿಪಾದನೆ ಮಾಡುತ್ತಾನೆ; ಅದಕ್ಕಾಗಿ ಅವನು ಪೃಥಕ್ ಪ್ರಯತ್ನ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದಿದ್ದಾನೆ. ಅದರಂತೆ, ಕಾವ್ಯ ಪುರುಷನ ಸ್ವಾಭಾವಿಕವಾದ ದೇಹ–ಧರ್ಮವಾಗುತ್ತದೆ ಎಂದು ಅಭಿನವಗುಪ್ತನು ಬಹು ಮಾರ್ಮಿಕವಾದ ಶಬ್ದಗಳಿಂದ ಹೇಳಿರುತ್ತಾನೆ. "ನ ತೇಷಾಂ ಬಹಿರಂಗತ್ವಂ ರಸಾಭಿವ್ಯಕ್ತಾ"[9] ಎಂದು ಅಭಿನವಗುಪ್ತನು ಸ್ಪಷ್ಟವಾಗಿ ಹೇಳಿರುತ್ತಾನೆ. ಈ ವಿಷಯದಲ್ಲಿ ಕಾಳಿದಾಸನೂ ಕೂಡ ಅದ್ವಯವಾದಿಯಾಗಿದ್ದನು– ಹೇಗೆಂದರೆ,

> "ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ರಯೇ ।
> ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥"[10]

ಎಂಬಂತೆ ವಾಕ್ ಮತ್ತು ಅರ್ಥ ಇವುಗಳ ಕಾವ್ಯದ ಅಂತರ್ನಿಹಿತವಾದ ಭಾವವಸ್ತು ಹಾಗೂ ಅವರ ಅಭಿವ್ಯಂಜಕ ಶಬ್ದ–ಪರಸ್ಪರ ನಿತ್ಯ ಸಂಬಂಧವಿರುತ್ತದೆ; ವಿಶ್ವದ ಸೃಷ್ಟಿಗೆ ಆದಿ ಮಾತಾಪಿತರಾದ ಪಾರ್ವತೀ ಪರಮೇಶ್ವರರಂತೆ. ತ್ರಿಗುಣಗಳಿಂದ ಕೂಡಿದ ಶಕ್ತಿಯೇ ವಿಶುದ್ಧ ಚಿನ್ಮಯನಾದ ಶಿವನು ವಿಶ್ವದಲ್ಲಿ ಅಭಿವ್ಯಕ್ತನಾಗುವುದಕ್ಕೆ ಕಾರಣ. ಶಿವನ ಆಶ್ರಯವಿಲ್ಲದೆ ಶಕ್ತಿಯ ಲೀಲೆಗಳು ಇರುವುದಿಲ್ಲ; ಶಕ್ತಿಯಿಲ್ಲದೆ ಶಿವನೆ ಅಸ್ತಿತ್ವವಿರುವುದಿಲ್ಲ, ಅವನು ಶವಮಾತ್ರವಾಗುತ್ತಾನೆ. ಸಾಹಿತ್ಯದ ಕ್ಷೇತ್ರದಲ್ಲಿಯೂ ಸಹ ಭಾವರೂಪ ಮಹೇಶ್ವರ ಹಾಗೂ ಶಬ್ದರೂಪ ಪಾರ್ವತೀ ಪರಸ್ಪರ ಆಶ್ರಿತರಾಗಿರುತ್ತಾರೆ. 'ರಸಾನುಭೂತಿಯ ಸಮಗ್ರತೆಗಾಗಿ ವರ್ಣ, ಚಿತ್ರ, ಮತ್ತು ಸಂಗೀತಗಳಲ್ಲಿ ಯಾವ ಭಾಷೆಯು ಅಧಿಕವಾಗಿ ಮೂರ್ತರೂಪ ಕೊಡಲು ಸಮರ್ಥವೋ, ಆ ಭಾಷೆಯು ಅಷ್ಟೇಸುಂದರ ಹಾಗೂ ಮಧುರವಾಗಿರುತ್ತದೆಂಬ ವಾಸ್ತವ

8 ಧ್ವನ್ಯಾಲೋಕಗ್ರಂಥ

9 'ಅಭಿನವಭಾರತೀ'

10 'ರಘುವಂಶಮ್', 1-1

ಸಂಗತಿಯನ್ನು ಮಹಾಕವಿ ಕಾಳಿದಾಸನ ಉಪಮಾ[11] (ಅಥವಾ ಅಲಂಕಾರ) ಪ್ರಯೋಗದ ಸಂದರ್ಭದಲ್ಲಿ ವಿವೇಚನೆಮಾಡುವುದು ಆವಶ್ಯಕ. ಕಾಳಿದಾಸನು ತನ್ನ ಉಪಮೆಯ ಮುಖೇನ ದೇವತೆ ಮತ್ತು ಮಾನವರಿಬ್ಬರನ್ನೂ ಗೌರವಾನ್ವಿತರನ್ನಾಗಿ ಮಾಡಿದ್ದಾನೆ. ಸಮಾಧಿಯಲ್ಲಿ ನಿರತನಾಗಿದ್ದ ಈಶ್ವರನಿಗೆ ಕೊಡುವ ಉಪಮಾನದಿಂದ ಯಾವ ಅಪೂರ್ವವಾದ ಸ್ತಬ್ಧತೆಯ ಪರಿಚಯವಾಗು ವುದೋ, ಅದರ ಸೌಂದರ್ಯವನ್ನು ಅನುಭವಿಸಬೇಕು; (ಕುಮಾರ ಸಂಭವ 3–48)–

> "ಅವೃಷ್ಟಿ ಸಂರಂಭಮಿವಾಂಬುವಾಹಮ್
> ಆಪಾಮಿವಾಧಾರವನುತ್ತರಂಗಮ್ ।
> ಅಂತಶ್ಚರಾಣಾಂ ಮರುತಾಂ ನಿರೋಧಾತ್
> ನಿವಾತನಿಷ್ಕಂಪಮಿವ ಪ್ರದೀಪಮ್ ॥"

ಯೋಗೇಶ್ವರನಾದ ಶಿವನು ಶರೀರದಲ್ಲಿನ ಸಮಸ್ತವಾಯುಗಳನ್ನೂ ನಿರೋಧ ಮಾಡಿ ಪರ್ಯಂಕಬಂಧದಲ್ಲಿ ಸ್ಥಿರವಾಗಿ ಅಚಂಚಲಭಾವದಿಂದ ಕುಳಿತಿದ್ದಾನೆ. ಹೇಗೆಂದರೆ, ವೃಷ್ಟಿಯ ಸಂಭ್ರಮವಿಲ್ಲದಿರುವ ಮೇಘದಂತೆ (ಜಲವನ್ನು ಧರಿಸಿರುವ ಮೇಘವು ಯಾವ ಕ್ಷಣದಲ್ಲಿಯಾದರೂ ಮಳೆಯನ್ನು ಸುರಿಸಬಹುದು), ತರಂಗ ವಿಲ್ಲದಿರುವ ಸಮುದ್ರದಂತೆ (ಚಂಚಲವಾದ ಜಲರಾಶಿಗೆ ಆಧಾರಭೂತವಾದ ಸಮುದ್ರವು ಅಲೆಗಳಿಲ್ಲದೆ ಅಚಂಚಲವಾಗಿರುವಂತೆ; "ಅಪಾಮಿವಾಧಾರ" ಎಂಬುದಕ್ಕೆ ಇದೇ ಧ್ವನ್ಯರ್ಥ), ಮತ್ತು ಗಾಳಿ ಇಲ್ಲದೆ ನಿಷ್ಕಂಪವಾಗಿರುವ ಪ್ರದೀಪದಂತೆ. ಈ ಮೂರು ಪ್ರಾಕೃತಿಕ ಉಪಮಾನಗಳನ್ನು ಕೊಟ್ಟು ಕಾಳಿದಾಸನು ಯೋಗಿರಾಜನ ಅಚಂಚಲ ವಾದ ಸ್ಥಿರತೆಯನ್ನು ಅಭಿವ್ಯಕ್ತಮಾಡಿ ಅವನ ಗೌರವದ ಒಂದು ಎಳೆಯನ್ನು ಚಿತ್ರಿಸು ವಂತೆ ಕಂಡು ಬರುತ್ತದೆ. ಕಾಳಿದಾಸನ ಉಪಮಾನಗಳು ರಸಾತ್ಮಕವಾಗಿಯೂ, ರಸಪೇಶಲವಾಗಿಯೂ, ಇಷ್ಟು ಹೃದಯಸ್ಪರ್ಶಿಯಾಗಿವೆ. ಔಚಿತ್ಯ ಮತ್ತು ಸಂದರ್ಭವನ್ನು ಸುಶೋಭಿತವನ್ನಾಗಿ ಮಾಡುವ ಕಲೆಗಳಲ್ಲಿ ಅಪೂರ್ವವಾಗಿವೆ.

'ರಘುವಂಶ'ದಲ್ಲಿನ ಇಂದುಮತಿಯ ಸ್ವಯಂವರದಲ್ಲಿ ಉಪಸ್ಥಿತರಾಗಿದ್ದ ರಾಜರುಗಳಲ್ಲಿ ಒಬ್ಬೊರನ್ನಾಗಿ ಬಿಟ್ಟು ಇಂದುಮತಿಯು ಮುಂದುವರಿಯುತ್ತಿರಲು, ರಾಜಮಾರ್ಗದಲ್ಲಿ ದೀಪವು ಮುಂದೆ ಮುಂದೆ ಹೋದಾಗ, ಹಿಂದಿನಮನೆಗಳ ಪರಿಸ್ಥಿತಿಯಂತಾಯಿತು. ಅನೇಕ ರಾಜರು ವಿಷಣ್ಣವದನರಾದುದನ್ನೂ ಮತ್ತು ಅವರ ಔದಾಸೀನ್ಯವನ್ನೂ ಈ ಉಪಮಾನದ ದ್ವಾರಾ ಬಹು ಸುಂದರವಾಗಿ ನಿರೂಪಿಸಿದ್ದಾನೆ. ಈ ಉಪಮಾನ ಪ್ರಯೋಗದ ಸೌಂದರ್ಯದಿಂದ ಈ ಮಹಾಕವಿಯು "ದೀಪಶಿಖಾ ಕಾಳಿದಾಸ" ನೆಂದು ಕವಿಗೋಷ್ಠಿಯಲ್ಲಿ ಪ್ರಸಿದ್ಧನಾಗಿದ್ದಾನೆ. 'ಸ್ಥಾನೀಯರಂಜನೆಯಿಂದ ಸುಶೋಭಿತವಾಗಿರುವುದೂ ಮತ್ತು ಕೇಳುವವನ ಚಕ್ಷುಃಪಟಲದ ಮುಂದೆ ಸಮಗ್ರ ಚಿತ್ರವನ್ನು ಪ್ರಸ್ತುತಗೊಳಿಸುವುದೇ ಕಾಳಿದಾಸನ ವೈಶಿಷ್ಟ್ಯ ವೆನಿಸಿದೆ.

**ಕಾಳಿದಾಸನ ಕೃತಿಗಳಲ್ಲಿ ಪಾತ್ರಗಳ ಚಿತ್ರಣ**

ಕಾಳಿದಾಸನ ಪಾತ್ರಗಳು ಜೀವನ ಶಕ್ತಿಯಿಂದ ಸಂಪನ್ನವಾದ ಜೀವಂತ ಜಗತ್ತಿನ ವ್ಯಕ್ತಿಗಳು. ಆತನ ಶಕುಂತಲೆಯು ಪ್ರಕೃತಿಯ ಕನ್ಯೆ, ಆಶ್ರಮದ ನಿಸರ್ಗ ಬಾಲಿಕಾ, ಮತ್ತು ಅವಳ ಜೀವನವನ್ನು ಬಾಹ್ಯಪ್ರಕೃತಿಯು ಕೋಮಲ ಮತ್ತು ಸ್ನಿಗ್ಧವನ್ನಾಗಿ ಮಾಡಿದೆ. ಹಿಮವಂತನ ಮಗಳಾದ ಪಾರ್ವತಿಯು ತಪಸ್ಸು ಮತ್ತು ಪಾತಿವ್ರತ್ಯದ ಪ್ರತೀಕ; ಮತ್ತು ಅವಳ ಕಠೋರವಾದ ತಪಸ್ಸಿನ ಮುಂದೆ ಋಷಿಗಳೂ ಸಹ ತಮ್ಮ ತಲೆಯನ್ನು ತಗ್ಗಿಸುತ್ತಾರೆ. ಧೀರತೆಯ ಮೂರ್ತಿ ಧಾರಿಣೀದೇವಿ. ಚಪಲ ಪ್ರೇಮದ ಮೂರ್ತಿಯಾದ ಮಾಳವಿಕಾ, ಉನ್ಮತ್ತಪ್ರೇಮದ ಅಧಿಕಾರಿಣಿಯಾದ ಊರ್ವಶೀ, ಪರಸ್ಪರ ಈರ್ಷ್ಯಾ ಮತ್ತು ಪ್ರಣಯದ ಪ್ರತಿನಿಧಿಯಾದ ಇರಾವತೀ, ಇವರುಗಳು ಸಂಸ್ಕೃತ ಸಾಹಿತ್ಯದಲ್ಲಿ ಅವಿಸ್ಮರಣೀಯರಾದ ಸ್ತ್ರೀಪಾತ್ರಗಳು. ಆದರ್ಶ ಪಾತ್ರಗಳ ಚಿತ್ರಣದಲ್ಲಿ ರಘುವಂಶವು ಅದ್ವಿತೀಯವಾದುದು. ದೇವಬ್ರಾಹ್ಮಣರಲ್ಲಿ ಭಕ್ತಿ, ದೈವಭಕ್ತಿ, ಗುರುವಾಕ್ಯದಲ್ಲಿ ಅಚಲವಾದ ವಿಶ್ವಾಸ, ಮಾತೃ ಸದೃಶವಾದ ಗೋವಿನ ಸೇವೆ, ಅತಿಥಿಯ ಮನೋಭಿಲಾಷೆಯನ್ನು ಪೂರ್ಣಮಾಡುವುದರಲ್ಲಿ ರಾಜನ ವ್ಯಾಕುಲತೆ, ಲೋಕರಂಜನೆ ಮತ್ತು ತನ್ನ ವಂಶವನ್ನು ನಿಷ್ಕಳಂಕವನ್ನಾಗಿ ಮಾಡುವುದಕ್ಕಾಗಿ ತನ್ನ ಪ್ರಾಣಸದೃಶಳಾದ ಧರ್ಮಪತ್ನಿಯನ್ನು ತ್ಯಜಿಸುವುದು, ಇವೇ ಕಾಳಿದಾಸನ

[11] "ಉಪಮಾ ಕಾಲಿದಾಸಸ್ಯ" ಎಂಬ ಲೋಕೋಕ್ತಿಯಂತೆ.....

ಆದರ್ಶ ಸೃಷ್ಟಿಯ ಕೆಲವು ದೃಷ್ಟಾಂತಗಳು. ಕಾಳಿದಾಸನು ಸ್ತ್ರೀಯ ಸ್ನಿಗ್ಧರೂಪವನ್ನು ವರ್ಣಿಸುವುದರಲ್ಲಿ ಮಾತ್ರ ಸಮರ್ಥನಾಗಿರದೇ, ಸ್ತ್ರೀತ್ವದ ಸ್ವರೂಪ ಮತ್ತು ಉದಾತ್ತ ಮನೋಭಾವಗಳನ್ನು ಚಿತ್ರಿಸುವುದರಲ್ಲಿಯೂ ಸಿದ್ಧಹಸ್ತನಾಗಿರುತ್ತಾನೆ.

ಪುರುಷ ಪಾತ್ರಗಳ ಚಿತ್ರಣವೂ ಸಹ ಅಷ್ಟೇ ಸ್ವಾಭಾವಿಕ ಮತ್ತು ಭಾವಪೂರ್ಣವಾಗಿವೆ. ಗುರುವಿನ ಆಜ್ಞಾನುವರ್ತಿಯಾಗಿ ನಂದಿನಿಯನ್ನು ಸೇವಿಸುವ ದಿಲೀಪನ ಚಾರಿತ್ರ್ಯವು ಎಷ್ಟು ಸುಂದರವಾಗಿದೆಯೋ ಅಷ್ಟೇ, ವರತಂತುವಿನ ಶಿಷ್ಯನಾದ ಕೌತ್ಸನ ಅಭಿಲಾಷೆಯನ್ನು ಪೂರ್ಣಮಾಡುವ ರಘುವಿನ ಚಾರಿತ್ರ್ಯವೂ ಶ್ಲಾಘನೀಯವಾಗಿದೆ. ಶ್ರೀರಾಮನ ಚಾರಿತ್ರ್ಯವನ್ನು ಈ ಕವಿಯು ಅತ್ಯಂತ ಕೋಮಲವಾಗಿ ಚಿತ್ರಿಸಿದ್ದಾನೆ. ವೈದೇಹಿಯ ವಿಷಯದಲ್ಲಿ ನಿಂದೆಯನ್ನು ಕೇಳಿ ರಾಮನ ಹೃದಯವು, ಬೆಂಕಿಯಲ್ಲಿನ ಲೋಹದಂತೆ ಕರಗಿ, ಕಠೋರ ಹಾಗೂ ಕೋಮಲ ವಾಗಿಯೂ ಇರುವುದನ್ನು ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾನೆ (ರಘು. 14–33). ರಾಮನ ಹೃದಯವು ಲೋಹದಂತೆ ಕಠೋರವಾಗಿಯೂ, ಮತ್ತು ತಪ್ತವಾಗಿದ್ದರೂ ಸಹ, ಕೋಮಲವಾಗಿದೆ. ಅಪಕೀರ್ತಿಯನ್ನು ಲೋಹದ ಘಟ್ಟಿಯೊಡನೆ ಹೋಲಿಸಿ, ಅದರ ಕಠೋರತೆಯ ಕಡೆಗೆ ನಮ್ಮ ದೃಷ್ಟಿಯು ಆಕೃಷ್ಟವಾಗುವಂತೆ ಕವಿಯು ವರ್ಣಿಸಿದ್ದಾನೆ. ಸ್ವಾಭಿಮಾನಿಯಾದ ರಾಮನ ಹೃದಯವು ಕೆಲವೆಡೆ ವ್ಯಕ್ತವಾಗುತ್ತದೆ.

**ಕಾಳಿದಾಸನ ಕೃತಿಗಳಲ್ಲಿ ಪ್ರಕೃತಿಯ ವರ್ಣನೆ ಮತ್ತು ರಾಷ್ಟ್ರೀಯ ಭಾವನೆ**

ಕಾಳಿದಾಸನು ಪ್ರಕೃತಿಯ ಆರಾಧಕ, ಅವನ ಸೂಕ್ಷ್ಮ ದೃಷ್ಟಿಯು ಪ್ರಕೃತಿಯ ಸೂಕ್ಷ್ಮರಹಸ್ಯಗಳನ್ನು ಸಾವಧಾನದಿಂದ ಹೃದಯಂಗಮವಾಗಿ ಚಿತ್ರಿಸಿದೆ. ಅರ್ಜಿ ಪ್ರಕೃತಿಯ ವರ್ಣನೆಯು ನಮ್ಮ ಕಣ್ಣುಗಳ ಮುಂದೆ ನರ್ತಿಸುವಂತೆ ಸಚಿನವಾಗಿದೆ ಬಾಹ್ಯ ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದೂ, ಮತ್ತು ಅವುಗಳ ಮನಸ್ಸನ್ನು ಗ್ರಹಿಸುವುದೂ ಕಾಳಿದಾಸನ ಮಹತ್ತರವಾದ ವೈಶಿಷ್ಟ್ಯ ಮಾನವನ ಮತ್ತು ಪ್ರಕೃತಿಯ ಮಂಜುಳವಾದ ಸಂಪರ್ಕ, ಮತ್ತು ಅದ್ಭುತವಾದ ವಿಕರಸತೆಯನ್ನ ಪ್ರದರ್ಶಿಸಿ, ಕವಿಯು ಪ್ರಕೃತಿಯಲ್ಲಿ ಸ್ಫುರಿಸುವ ಹೃದಯವನ್ನು ಕಾಣುತ್ತಾನೆ. ಪ್ರಕೃತಿಯ ವರ್ಣನೆಯಲ್ಲಿ ಭಾರತೀಯತೆಯ ವೈಶಿಷ್ಟ್ಯ ಅಡಕವಾಗಿದೆ.ಈ ಮಹಾಕವಿಯು ಪ್ರಕೃತಿಯನ್ನು ಸುಂದರ ವಾದ ಅಲಂಕಾರಗಳಿಂದ ಯುಕ್ತವಾದದ್ದನ್ನಾಗಿ ಮಾಡಿ ವರ್ಣಿಸುತ್ತಾನೆ. ಕಾಳಿದಾಸನ ವರ್ಣನೆಯು ಅತ್ಯಂತ ಸೂಕ್ಷ್ಮ ಸುಂದರ ಮತ್ತು ಸಂಕ್ಷಿಪ್ತವಾಗಿರುತ್ತದೆ. ಮೇಘ ದೂತವು ಭಾರತೀಯ ಕವಿಯ ಅದ್ಭುತವಾದ ಪ್ರತಿಭೆಯ ದ್ವಾರಾ ಚಿತ್ರಿತವಾಗಿರುವ ಅತ್ಯಂತ ಸರಸವಾದ ಚಿತ್ರಣವಾಗಿರುತ್ತದೆ. ಋತುಸಂಹಾರದಲ್ಲಿ ಸಮಸ್ತೆಋತುಗಳೂ ತಮ್ಮ ತಮ್ಮ ವಿಶಿಷ್ಟ ರೂಪದಿಂದ ಚಿತ್ರಿತವಾಗಿ ಆಹ್ಲಾದಕರವಾಗಿವೆ, ರಘುವಂಶದಲ್ಲಿನ ಪ್ರಥಮಸರ್ಗದ (ಶ್ಲೋಕಗಳು 49–53) ತಪೋವನದ ವರ್ಣನೆ, ಮತ್ತು ಹದಿಮೂರನೆಯ ಸರ್ಗದಲ್ಲಿನ ತ್ರಿವೇಣಿಯ (54–57) ಸುಂದರವಾದ ವರ್ಣನೆಯ ಕಲ್ಪನೆಗಳ ಜೊತೆಯಲ್ಲಿ ಸೂಕ್ಷ್ಮವಾದ ಅವಲೋಕನದ ಶಕ್ತಿಯ ಮಂಜುಳವಾದ ಸಾಮರಸ್ಯವಿದೆ.

**ಭಾರತವು ಒಂದು ಅಖಂಡ ರಾಷ್ಟ್ರ**; ವಿಶಾಲವಾದ ಈ ದೇಶದಲ್ಲಿ ಭಾಷೆ, ಮತ್ತು ವಿಭಿನ್ನ ಪ್ರಾಂತ್ಯಗಳ ವೇಷ–ಭೂಷಣಗಳಲ್ಲಿಯೂ ವೈವಿಧ್ಯತೆ ಕಂಡುಬರುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಸಾಂಸ್ಕೃತಿಕ ಏಕತೆಯು ನಮಗೆ ದೃಷ್ಟಿಗೋಚರವಾಗುತ್ತದೆ. ಕಾಳಿದಾಸನಾದರೋ ಭಾರತೀಯ ಸಂಸ್ಕೃತಿಯ ಹೃದಯವಾಗಿದ್ದನು. ಅವನ ಕವಿತೆಯಲ್ಲಿ ನಮ್ಮ ಸಭ್ಯತೆಯು ನರ್ತಿಸುತ್ತದೆ. ಅವನ ನಾಟಕಗಳಲ್ಲಿ ವಿಶ್ವದ ರಂಗಮಂಟಪದ ಮೇಲೆ ನಮ್ಮ ಸಂಸ್ಕೃತಿಯು ತನ್ನ ಭವ್ಯವಾದ ರೂಪವನ್ನು ಪ್ರದರ್ಶಿಸುತ್ತದೆ, ಅವನ ವಾಣಿಯಾದರೂ ರಾಷ್ಟ್ರೀಯ ಭಾವನೆಯಿಂದ ಓತಪ್ರೋತವಾಗಿದೆ. ಇಂದಿಗೂ ಸಹ ಈ ಮಹಾಕವಿಯ ವಾಣಿಯಿಂದ ಸ್ಫೂರ್ತಿಯನ್ನು ಹೊಂದಿ ನಮ್ಮ ಸಮಾಜದ ಸುಧಾರಣೆಯನ್ನು ಮಾಡಬಹುದು, ಮತ್ತು ವೈಯಕ್ತಿಕವಾದ ಕಲ್ಯಾಣವನ್ನು ಹೊಂದಬಹುದು. ಕಾಳಿದಾಸನು ಅಖಂಡ ಭಾರತದ ಸ್ತುತಿಯನ್ನು ಮಾಡಿರುತ್ತಾನೆ. ಅಭಿಜ್ಞಾನ ಶಾಕುಂತಲಾ ನಾಟಕದಲ್ಲಿ ಈಶ್ವರನ ಅಷ್ಟಮೂರ್ತಿಗಳ ಉಲ್ಲೇಖವಿರುತ್ತದೆ. ಕುಮಾರ ಸಂಭವದಲ್ಲಿಯೂ ಸಹ (6–26) ಈ ಅಷ್ಟಮೂರ್ತಿಗಳನ್ನು ವಿಸ್ತಾರವಾಗಿ ವರ್ಣಿಸಿ, ಜಗತ್ತಿನ ರಕ್ಷಣಾ ಕಾರ್ಯವನ್ನು ಸ್ಪಷ್ಟವಾಗಿ ಸೂಚಿಸಿದ್ದಾನೆ. ಅಷ್ಟ ಮೂರ್ತಿಗಳಿಂದ ಕೂಡಿದ ಈಶ್ವರನ ಉಪಾಸನೆಯೇ

ಕಾಳಿದಾಸನಿಗೆ ಅತ್ಯಂತ ಪ್ರಿಯವಾಗಿದ್ದಿತು. ಮಹಾದೇವನ ಎಂಟುಮೂರ್ತಿಗಳು ಇವು ಸೂರ್ಯ, ಚಂದ್ರ, ಯಜಮಾನ, ಪೃಥಿವೀ, ಜಲ, ಅಗ್ನಿ, ವಾಯು, ಮತ್ತು ಆಕಾಶ. ಈ ಎಲ್ಲಾ ಮೂರ್ತಿಗಳೂ ಪ್ರತ್ಯಕ್ಷವಾಗಿ ದೃಷ್ಟಿ ಗೋಚರವಾಗುತ್ತವೆ. ಪ್ರತ್ಯಕ್ಷವಾದ ಈ ಮೂರ್ತಿಗಳನ್ನು ಧರಿಸಿರುವವನು ಈ ಜಗತ್ತಿನ ನಿಯಾಮಕನಾಗಿದ್ದಾನೆ. ಹೀಗೆ, ಕಾಳಿದಾಸನು ವೈದಿಕಧರ್ಮ ಹಾಗೂ ಸಂಸ್ಕೃತಿಯ ಪ್ರತಿನಿಧಿಯಾಗಿದ್ದನು. "ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿಃ ಅವತು ವಸ್ತಾಭಿರಷ್ಟಾಭಿರೀಶಃ॥"

## ಉಪಸಂಹಾರ

ಕಾಳಿದಾಸನು ಭಾರತೀಯ ಸಂಸ್ಕೃತಿಯ ಪ್ರತಿನಿಧಿಯಾದ ಕವಿ, ಅವನ ಪಾತ್ರಗಳು ಭಾರತೀಯತೆಯ ಭವ್ಯಮೂರ್ತಿಗಳು, ಜೀವನದ ನೈಜಪರಿಸ್ಥಿತಿಗಳ ಮಾರ್ಮಿಕರೂಪವನ್ನು ಗ್ರಹಿಸುವ ಯೋಗ್ಯತೆಯು ಯಾವ ಕವಿಗೆ ಇರುತ್ತದೆಯೋ, ಅವನೇ ಜನಪ್ರಿಯನಾದ ಕವಿಯಾಗಬಲ್ಲ. ಇದರಲ್ಲಿಯೇ ಕಾಳಿದಾಸನ ವೈಶಿಷ್ಟ್ಯವಿರುವುದು. ಭಾರತೀಯ ಸಮಾಜದ ನೈಜಪರಿಸ್ಥಿತಿಯು ಅಥವಾ ರೂಪವು ಅವನ ಕಾವ್ಯಗಳಲ್ಲಿ ಪ್ರತಿಬಿಂಬಿತವಾಗಿವೆ ಮತ್ತು ಅವನ ನಾಟಕಗಳಲ್ಲಿ ತನ್ನ ವೈಶಿಷ್ಟ್ಯವನ್ನು ಪ್ರದರ್ಶಿಸಿವೆ. ವರ್ಣಿತ ನಾಗುವ ವಿಷಯ ಮತ್ತು ವರ್ಣನ ಪ್ರಕಾರಗಳ ಮಂಜುಳವಾದ ಸಾಮಂಜಸ್ಯವೇ ಕಾಳಿದಾಸನ ಕವಿತೆಯ ಪ್ರಧಾನಗುಣ. ಆರಿಸಿದ ಕೆಲವೇ ಶಬ್ದಗಳಲ್ಲಿ ಯಾವ ಭಾವನೆಗಳನ್ನು ಕಾಳಿದಾಸನು ಅಭಿವ್ಯಕ್ತಗೊಳಿಸುತ್ತಾನೋ, ಅವುಗಳನ್ನು ಬೇರೊಬ್ಬ ಕವಿಯು ವಿಸ್ತಾರವಾಗಿಯೂ ಪ್ರಕಟಗೊಳಿಸಲು ಸಾಧ್ಯವಿಲ್ಲ. ಯಾವ ಭಾವನೆಗಳನ್ನು ಎಷ್ಟು ಪದಗಳಿಂದ ವರ್ಣಿಸಿದರೆ ಅವು ಕಲಾತ್ಮಕವಾಗಿಯೂ ಮತ್ತು ಮನೋಹರವಾಗಿಯೂ, ಅವುಗಳನ್ನು ಆದೇರೀತಿಯಲ್ಲಿ ವರ್ಣಿಸಿ ತನ್ನ ಭಾವುಕತೆಯ ಪರಿಚಯವನ್ನು ಮಾಡಿಕೊಡುತ್ತಾನೆ. ಕಾಳಿದಾಸನ ಕಾವ್ಯಗಳಲ್ಲಿ ಹೃದಯ ಪಕ್ಷಕ್ಕೆ ಪ್ರಾಧಾನ್ಯವಿರುತ್ತದೆ. ಮಾನವನ ಹೃದಯದ ಪರಿವರ್ತನಶೀಲವಾದ ವೃತ್ತಿಗಳನ್ನು ತಿಳಿಯಲು ಮತ್ತು ಅವುಗಳನ್ನು ಅಭಿವ್ಯಕ್ತಗೊಳಿಸಲು ಕವಿಯು ಅದ್ಭುತವಾದ ಕೌಶಲವನ್ನು ಪ್ರದರ್ಶಿಸುತ್ತಾನೆ. ಸಂಸಾರದ ಪರಿಪೂರ್ಣವಾದ ಅನುಭವವಿದ್ದು, ಈ ಅನುಭವಗಳ ರಹಸ್ಯಗಳನ್ನು ಗ್ರಹಿಸುವುದರಲ್ಲಿ ಅಪೂರ್ವವಾದ ಭಾವುಕತೆ ಪ್ರಕಟವಾಗುತ್ತದೆ. ಆನಂದವರ್ಧನ ಮತ್ತು ಜರ್ಮನ್ ಕವಿ ಗೆಯಟೆ ಇವರು ಕಾಳಿದಾಸನ ಭಾವಗಳ ಉದಾತ್ತತೆ, ಮತ್ತು ಮಹನೀಯ ರೂಪವನ್ನು ಮುಕ್ತ ಕಂಠದಿಂದ ಹೊಗಳಿರುತ್ತಾರೆ. ನಮ್ಮ ರಾಷ್ಟ್ರೀಯ ಭಾವನೆಗೂ ಮತ್ತು ವಿಶ್ವದ ಕಲ್ಯಾಣ ಭಾವನೆಗೂ ಯಾವ ವಿಧವಾದ ವಿರೋಧವಿಲ್ಲ, ಕಾಳಿದಾಸನೆಂಬ ಭಾರತೀಯಕವಿಯು ರಾಷ್ಟ್ರದ ಮಂಗಳವನ್ನು ಅಪೇಕ್ಷಿಸುತ್ತಾನೆ. ಜೊತೆಯಲ್ಲಿ ವಿಶ್ವದ ಮಂಗಳವನ್ನೂ ಇಚ್ಛಿಸುತ್ತಾನೆ. ಕಾಳಿದಾಸನ ಕಾವ್ಯಗಳಲ್ಲಿ ಈ ಸಾಮಂಜಸ್ಯವು ಮನೋಹರವಾಗಿ ದೃಷ್ಟಿಗೋಚರವಾಗುತ್ತದೆ. ಕಾಳಿದಾಸನ ಸಂದೇಶವನ್ನು ಅವನ ಸರ್ವ ಶ್ರೇಷ್ಠ ರಚನೆಯ ಒಂದೇ ಶ್ಲೋಕದಲ್ಲಿ ಪ್ರಕಟಿಸಬಹುದು.

> ಪ್ರವರ್ತತಾಂ ಪ್ರಕೃತಿ ಹಿತಾಯ ಪಾರ್ಥಿವಸರಸ್ವತೀ ಶ್ರುತಿಮಹತಾಂ ಮಹೀಯತಾಮ್ ।
> ಮಮಾಪಿ ಚ ಕ್ಷಪಯತು ನೀಲಲೋಹಿತಃ ಪುನರ್ಭವಂ ಪರಿಗತಶಕ್ತಿ ರಾಷ್ಟ್ರಭೂಃ॥

ರಾಜರು ಪ್ರಜೆಗಳ ಹಿತ ಸಾಧನೆಯಲ್ಲಿ ಮಗ್ನರಾಗಲಿ, ಶಾಸ್ತ್ರಗಳ ಅಧ್ಯಯನದಿಂದ ಮಹತ್ವಶಾಲಿಯಾದ ವಿದ್ವಾಂಸರ ವಾಣಿಯು ಸರ್ವತ್ರ ಪೂಜಿತನಾಗಲಿ, ಶಕ್ತಿಸಂಪನ್ನನಾದ ಭಗವಾನ್ ಶಂಕರನು ಸಮಸ್ತ ಜೀವಕೋಟಿಗಳಿಗೂ ಪುನರ್ಜನ್ಮವನ್ನು ದೂರ ಮಾಡಲಿ. ರಾಜನ ಪ್ರಧಾನವಾದ ಕಾರ್ಯವು ಪ್ರಜಾರಂಜನೆ, ಅರಾಜಕವಾದ ರಾಜ್ಯ ದುರ್ಗುಣಗಳಿಂದ ತುಂಬಿರುತ್ತದೆ. ರಾಜನಿಲ್ಲದಿದ್ದರೆ ಸಮಾಜವು ನಷ್ಟವಾಗುತ್ತದೆ. ಪ್ರಜೆಗಳ ರಕ್ಷಣೆಯೇ ರಾಜನ ಪ್ರಧಾನ ಕರ್ತವ್ಯವಾಗಿರುತ್ತದೆ. ರಾಜ್ಯದ ಉನ್ನತ ಮತ್ತು ಅಭ್ಯುದಯಕ್ಕೆ ಅಲ್ಲಿರುವ ವಿದ್ವಾಂಸರು ಕಾರಣರು,ಅದರಿಂದ ಅವರು ಸರಸ್ವತಿಯನ್ನು ಪೂಜಿಸುವುದು ಪವಿತ್ರ ಕಾರ್ಯವಾಗಿರುತ್ತದೆ ಎಂದು ವಿವರಿಸಲಾಗಿದೆ.

## ಪರಾಮರ್ಶನಗ್ರಂಥಗಳು

1. ಮಹಾಕವಿಕಾಲಿದಾಸ ವಿರಚಿತ 'ಅಭಿಜ್ಞಾನಶಾಕುಂತಲಮ್'– ಸಂಪಾದಕರು ಪ್ರೊ॥ ಕೆ.ಟಿ. ಪಾಂಡುರಂಗಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ತೃತೀಯ ಮುದ್ರಣ– 2009

2. 'ಸಂಸ್ಕೃತ ಸಾಹಿತ್ಯದ ಇತಿಹಾಸ'– ಮೂಲ ಲೇಖಕರು ಆಚಾರ್ಯ ಬಲದೇವ ಉಪಾಧ್ಯಾಯ, ಅನುವಾದಕರು ಎಸ್. ರಾಮಚಂದ್ರಶಾಸ್ತ್ರೀ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ದ್ವಿತೀಯ ಮುದ್ರಣ–2003
3. 'ಕವಿಕುಲಗುರು ಕಾಲಿದಾಸ'– ಆದ್ಯ ರಂಗಾಚಾರ್ಯ (ಶ್ರೀರಂಗ), ಅಭಿನವ ಪ್ರಕಾಶನ, ಬೆಂಗಳೂರು–560040, ದ್ವಿತೀಯ ಮುದ್ರಣ–2007
4. 'ರಘುವಂಶಮ್'– ಪ್ರೊ.ಹರಿ ದಾಮೋದರ ವೇಲಣಕರ್ ಎಂ.ಎ, ಚೌಖಾಮ್ಬಾ ಪಬ್ಲಿಷರ್ಸ್, ವಾರಾಣಸೀ– 221001 (ಭಾರತ), 2002
5. 'ಕುಮಾರಸಂಭವಮ್ ಆಫ್ ಕಾಲಿದಾಸ'– ಆರ್.ಡಿ. ಕರ್ಮಕರ್, ಚೌಖಾಂಭ ಸಂಸ್ಕೃತ ಪ್ರತಿಷ್ಠಾನ್, ದೆಹಲಿ, ಮುದ್ರಣ–2003, ಐಖಃಓ: 81–7084–177–7